## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1485 (1621) |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆ ಯಿಂದ ಚುನಾಯಿತರಾದವರು), |
| ಉತ್ತರಿಸುವ ದಿನಾಂಕ | 18-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪ ಉಪನೋಂದಣಿ ಕಛೇರಿಯಲ್ಲಿ ರೂ.22,73,165/- ನೋಂದಣಿ ಶುಲ್ಕ ಸರ್ಕಾರಕ್ಕೆ ನಷ್ಟ ಮಾಡಿರುವ ಉಪ ನೋಂದಣಾಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಅಮಾನತ್ತುಗೊಳಿಸಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ಅಮಾನತ್ತುಗೊಳಿಸಲಾಗುವುದು: (ವಿವರ ನೀಡುವುದು) | ಕೊಪ್ಪ ಉಪನೋಂದಣಿ ಕಛೇರಿಯಲ್ಲಿ ಸರ್ಕಾರಕ್ಕೆ ನಷ್ಟವುಂಟು ಮಾಡಿರುವ ಸಂಬಂಧಪಟ್ಟ ಉಪ ನೋಂದಣಾಧಿಕಾರಿ ವಿರುದ್ಧ ವಿಚಾರಣೆ ಕೈಗೊಳ್ಳಲು ಜಿಲ್ಲಾ ನೋಂದಣಾಧಿಕಾರಿ, ಚಿಕ್ಕಮಗಳೂರು ರವರು ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನಾಧರಿಸಿ ಸಂಬಂಧಪಟ್ಟ ಉಪ ನೋಂದಣಾಧಿಕಾರಿಗಳ ವಿರುದ್ಧ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಹಂತದಲ್ಲಿ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿರುತ್ತದೆ. |
| ಆ) | ರೂ.22,73,165/- ನೋಂದಣಿ ಶುಲ್ಕವನ್ನು ಸಂಬಂಧಿತ ಉಪನೋಂದಣಿ ಅಧಿಕಾರಿಯಿಂದಲೇ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಕೈಗೊಂಡ ಕ್ರಮಗಳೇನು; ಯಾವಾಗ ವಸೂಲಿ ಮಾಡಲಾಗುವುದು: | ಜಿಲ್ಲಾ ನೋಂದಣಾಧಿಕಾರಿ, ಚಿಕ್ಕಮಗಳೂರು ಇವರು ಸದರಿ ದಸ್ತಾವೇಜಿನ ಸಂಬಂಧ ಮಹಾಲೇಖಪಾಲರು ಆಕ್ಷೇಪಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಲು, ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಕಲಂ-46A ಮತ್ತು ನೋಂದಣಿ ಕಾಯ್ದೆ, 1908ರ ಕಲಂ-80 A ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಪ್ರಕರಣದಲ್ಲಿ ಉಂಟಾದ ಕೊರತೆ ಶುಲ್ಕ ರೂ. 22,73,165/-ಗಳನ್ನು ಭರಿಸುವಂತೆ ಸಂಬಂಧಪಟ್ಟ ಪಕ್ಷಕಾರರಿಗೆ ಜಿಲ್ಲಾ ನೋಂದಣಾಧಿಕಾರಿ, ಚಿಕ್ಕಮಗಳೂರು ರವರು ಆದೇಶ ಸಂಖ್ಯೆ:DRO/Chi/46A(1)/KOP/02/ 2022-23, ದಿನಾಂಕ:16-04-2025 ರಲ್ಲಿ ಆದೇಶಿಸಿರುತ್ತಾರೆ. |
| ಇ) | ಸಮರ್ಪಕ ತರಬೇತಿ ಪಡೆದಿರದ ಅನರ್ಹ ಉಪ ನೋಂದಣಾಧಿಕಾರಿಯವರನ್ನು ಇತರ ಕರ್ತವ್ಯಗಳಿಗೆ ನಿಯೋಜಿಸದೇ ಸರ್ಕಾರಕ್ಕೆ ನಷ್ಟವಾದರೂ ಅದೇ ಹುದ್ದೆಯಲ್ಲಿ ಮುಂದುವರೆಯಲು ಅವಕಾಶ ಕಲ್ಪಿಸುವ ಅನಿವಾರ್ಯತೆ ಸರ್ಕಾರಕ್ಕಿದೆಯೇ? (ವಿವರ ನೀಡುವುದು) | ಸದರಿ ದಸ್ತಾವೇಜನ್ನು ನೋಂದಾಯಿಸಿರುವ ಉಪ ನೋಂದಣಾಧಿಕಾರಿಯು ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಪದೋನ್ನತಿ ಹೊಂದಿ ಉಪ ನೋಂದಣಾಧಿಕಾರಿಯಾಗಿ ಕೊಪ್ಪ ಉಪನೋಂದಣಿ ಕಛೇರಿಯಲ್ಲಿ ಸುಮಾರು 04 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರನ್ನು ಈ ಕಛೇರಿಯಲ್ಲಿ ಮುಂದುವರೆಸುವ ಅನಿವಾರ್ಯತೆ ಸರ್ಕಾರಕ್ಕೆ ಇರುವುದಿಲ್ಲ. |

ಕಂಇ/88/ಎಂಎನ್ಎಸ್ಎ/2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು